ಓದುವ ಕಾಲಕ್ಕೆ ಮೇಷ್ಟರು ಚಳವಳಿಗಳಲ್ಲಿ ಭಾಗವಹಿಸಿ ಕೆಲವೊಮ್ಮೆ ಜೈಲಿಗೂ ಹೋಗಿ ಬಂದದ್ದನ್ನೂ ಆಳೋರು ಯಾವಾಗ್ಲೂ ಉಳ್ಳೋರ ಪರಾನೇ ಇರ್ತಾರೆ ಹಂಗಾಗಿ ಈ ನಕ್ಸಲ್ ಮುಂತಾದ ಚಳವಳಿಗಳು ಹುಟ್ಟಿಕೊಂಡದ್ದು ಅಂತ ಎಂದೋ ಯಾವುದೋ ಭಾಷಣದಲ್ಲಿ ಹೇಳಿದ್ದನ್ನೇ ಪುರಾವೆಯನ್ನಾಗಿಸಿದ್ದ ಆ ಗ್ಯಾಂಗು ಮೇಷ್ಟರನ್ನು ನಕ್ಸಲ್ ನಂಟಿಗೆ ಗಂಟಾಕಿತ್ತು. ಆ ಕಾರಣಕ್ಕಾಗಿ ಮೇಷ್ಟರು ತನಿಖೆಗೂ ಒಳಪಡಬೇಕಾಗಿ ಬಂದಿತ್ತು. ಆದರದು ಕಡೆಗೆ ಠುಸ್ ಪಟಾಕಿಯಾಗಿತ್ತು. ಹಂಗಾಗಿ ಹಿಂದಿನ ದಿನ ಹೊನ್ನಟ್ಟಾಲಯ್ಯ ಕಂಡ ಘಟನೆಗೆ 'ಲವ್ ಜಿಹಾದ್' ಅಂತ ಪುಕಾರೆಬ್ಬಿಸಿ ಅದಕ್ಕೆ ಮೇಷ್ಟರ ಮೇಲೆ ನೇರ ಗೂಬೆ ಕೂರಿಸಿ ಮತ್ತೊಂದು ಕರಾಮತ್ತು ತೋರಿಸಲು ಪಣತೊಟ್ಟಿತ್ತು.

ಸಂಘ ಊರಿನ ದೇವರ ಹೆಸರಿನಲ್ಲಿದ್ದುದರಿಂದ ಯಾರೊಬ್ಬರೂ ಸಂಘದ ಬಗ್ಗೆ ಚಕಾರವೆತ್ತುವಂತಿರಲಿಲ್ಲ. ಆದರಿದಕ್ಕೆ ಪೈಪೋಟಿಯಂತೆ ಹುಡುಸ್ಲೇಗೌಡನ ಮಗ ವೀರಭದ್ರನ ಮುಂದಾಳತ್ವದಲ್ಲಿ ಮತ್ತೊಂದು ಸಂಘ ತಲೆ ಎತ್ತಿತ್ತು. ಶಂಭುಲಿಂಗೇಶ್ವರ ಯುವಕರ ಸಂಘ ಹಸಿರು ಟವೆಲ್ಲುಗಳನ್ನು ಹಾಕಿಕೊಂಡು ರೈತರ ದೀನ ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಮೂಢ ಆಚರಣೆಗಳ ಬಗ್ಗೆ ಮಾತಾಡತೊಡಗಿದರೆ ಎದುರಾಳಿ ಸಂಘ ಬಹುತೇಕ ಹಳ್ಳಿ ಮುಕ್ಕಗಳಿಗೆ ಅರ್ಥವಾಗದ ಭಾಷೆಯಲ್ಲಿ ಮಾತಾಡುತ್ತಾ ಕೇಸರಿ ಟವೆಲ್ಲುಗಳನ್ನು ಹೆಗಲಿಗೇರಿಸಿಕೊಂಡು ದೇವರು ಧರ್ಮ ಜಾತಿ ಸಂಸ್ಕೃತಿ ಮುಂತಾದವುಗಳ ಬಗ್ಗೆ ತಲೆಕೆಡಿಸಿಕೊಂಡಿತ್ತು. ಹಂಗಾಗಿ ಬೆಳಗು ಬೈಗುಗಳಲ್ಲಿ ಶಂಭುಲಿಂಗೇಶ್ವರನ ದೇಗುಲದಲ್ಲಿ ಯೋಗ ಧ್ಯಾನ ಧರ್ಮಪ್ರವಚನಗಳು ನಡೆಯತೊಡಗಿದ್ದವು. ಶಂಭುಲಿಂಗನ ಅಪ್ಪ ಅಡವಪ್ಪನೂ ಇವುಗಳ ಕಾಯಂ ಭಕ್ತನಾಗಿದ್ದ. ಅವುಗಳನ್ನು ನಡೆಸಿಕೊಡುತ್ತಿದ್ದ ಹೊರಗಿನವರು ಆಗಾಗ ಸಂಘದ ಬೈಠಕ್‌ಗಳನ್ನು ನಡೆಸುತ್ತಾ ಸಲಹೆ ಸೂಚನೆಗಳನ್ನು ಕೊಡುವುದಲ್ಲದೆ ಸಂಘದ ಸದಸ್ಯರನ್ನು ಊರಿನ ಏಕೈಕ ಬೀದಿಯಲ್ಲಿ ಪರೇಡ್ ಮಾಡಿಸುತ್ತಿದ್ದರು.

ಚಿಕ್ಕೋರನ ಸಾವಿನಲ್ಲಿ ಶಂಭುಲಿಗ ಮತ್ತವನ ಗೆಣೆಕಾರರು ತೋರಿದ್ದ ಕೈಚಳಕದಿಂದ ಕೆಂಡವಾಗಿದ್ದ ಹುಡುಸ್ಲೇಗೌಡ ಶಂಭುಲಿಂಗೇಶ್ವರ ಸಂಘವನ್ನು ಹೆಂಗಾರ ಮಾಡಿ ಖತಂ ಮಾಡಲು ಕಸರತ್ತು ನಡೆಸಿದ್ದ. 'ನೀನು ಅಂದರೆ ನಿಮ್ಮಪ್ಪ' ಅನ್ನುತ್ತಿದ್ದ ಅವರು ಮುಂದೊಂದು ದಿನ ತನ್ನಂಥವರ ತೋಟ ತುಡಿಕೆಗಳಿಗೆ ಕೆಲಸದವರು ಸಿಗದಂತೆ ಮಾಡುವುದಲ್ಲದೆ ತಮ್ಮ ವಿರುದ್ಧ ಎತ್ತಿ ಕಟ್ಟಲೂ ಹೇಸುವುದಿಲ್ಲ ಅನ್ನುವುದು ಅವನ ಮುಂದಾಲೋಚನೆಯಾಗಿತ್ತು. ಆ ನಿಟ್ಟಿನಲ್ಲಿ ಆ ಸಂಘದಲ್ಲಿದ್ದ ಕೆಲ ಜೊಳ್ಳುಗಳನ್ನು ಅಲ್ಲಿಂದ ಕಳಚಿಕೊಳ್ಳುವಂತೆ ಪುಸಲಾಯಿಸಿ ಮಗನ ಸಂಘಕ್ಕೆ ಜಮೆ ಮಾಡಿಸಿದ್ದ. ಆದರೆ, ಶಂಭುಲಿಂಗನ ಸಂಘ ಮಾತ್ರ ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಮುನ್ನುಗ್ಗುತ್ತಿತ್ತು. ನಿನ್ನೆ ರಾತ್ರಿ ಹೊನ್ನಟ್ಟಾಲಯ್ಯ ಕಂಡಿದ್ದ ಘಟನೆ ಅದರ ಕುರುಹಷ್ಟೇ ಆಗಿರದೆ ಹುಡುಸ್ಲೇಗೌಡನ ಮುಖೇಡಿ ಮಾರೆಗೆ ಡಿಚ್ಚಿ ಹೊಡೆದಿತ್ತು.

## 4

ಹಿಂದಿನ ದಿನ ಹೊನ್ನಟ್ಟಾಲಯ್ಯ ಮುಚ್ಚಂಜೆಯನ್ನು ಮೈಗಾಕಿಕೊಂಡು ಕತ್ತಲೆದೆಗೆ ಕುಲ್ಡು ಬ್ಯಾಟರಿ ಬಿಟ್ಟುಕೊಂಡು ಹೆಗಲಿಗೊಂದು ರಗ್ಗನ್ನು ಎಸಕಂಡು ಪಾಳು ಮಂಟಪದ ಜಾಡು ಹಿಡಿದಿದ್ದ. ಒಂದು ಕಾಲಕ್ಕೆ ಚಿಕ್ಕನಾಯಕ ಎಂಬ ಸಾಮಂತ ರಾಜ ಬೇಟೆಗೆಂದು ಕಾಡಿಗೆ ಹೋದಾಗ ವಿರಮಿಸುವ ಸಲುವಾಗಿ ಕಟ್ಟಿದ್ದ ಪುಟ್ಟ ಅರಮನೆಯಾಗಿದ್ದ ಅದೀಗ ಕುಸಿದು ಪಾಳು ಮಂಟಪವಾಗಿತ್ತು. ಹೊನ್ನಟ್ಟಾಲಯ್ಯ ಊರಲ್ಲಿದ್ದರೆ ದೇವರ ಮೇಲಿನ ಹೂ ತಪ್ಪಿದರೂ ಅವನಲ್ಲಿಗೆ ಹೋಗೋದು ತಪ್ಪಿಸುತ್ತಿರಲಿಲ್ಲ. ಅದಕ್ಕೆ ಆ ಹೊತ್ತಿನಲ್ಲಿ ಅಲ್ಲಿ ಸೇರುತ್ತಿದ್ದ ಗೆಳೆಯರನ್ನು ನೋಡುವುದು ಒಂದು ಕಾರಣವಾದರೆ ಅಲ್ಲಿನ ಕೆಲವರೊಂದಿಗೆ ಭಂಗಿ ಸೊಪ್ಪು ಸೇದುವುದು ಮತ್ತೊಂದು ಕಾರಣವಾಗಿತ್ತು. ಕೆಲವೊಮ್ಮೆ